೫೦೦ ಮೈಲಿಗಳ ದೂರದಲ್ಲಿರುವ ನಮ್ಮ ಭಾಗದಲ್ಲಿ ಇಲ್ಲ. ನಮ್ಮ ಭಾಗದ ಮಕ್ಕಳು ಓದಬಾರದು, ವಿದ್ಯಾವಂತರಾಗಬಾರದು ಎಂಬುದು ತಮ್ಮ ಅಭಿಪ್ರಾಯವೇ ? ನಮ್ಮ ಭಾಗಕ್ಕೆ ತಾವು ಮಲತಾಯಿ ಧೋರಣೆ ಮಾಡಬಾರದೆಂದು ಕೇಳಿಕೊಳ್ಳುತ್ತೇನೆ. ತಾವು ರಾಯಚೂರು ಜಿಲ್ಲೆಯ ಮಂತ್ರಿಗಳಾಗಿ ಅಲ್ಲಿಗೆ ಬರುವಾಗ ಬರಿ ಕೈಯಿಂದ ಬರದಾರದು. ನಮ್ಮ ಭಾಗಕ್ಕೆ ಸಂಪೂರ್ಣವಾದಂಥ ಸಹಾಯ ಮಾಡ ಬೇಕೆಂದು ಕೇಳಿಕೊಳ್ಳುತ್ತೇನೆ

ಇನ್ನು ಈ ಸರ್ಕಾರದವರು ಶ್ರೀ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದಾರೆ. ಪ್ರೈಮರಿ ಮತ್ತು ಹೈಸ್ಕೂಲುಗಳಿಗೆ ಸಂಬಂಧಪಟ್ಟಂತೆ ಈಗಾಗಲೇ ಶ್ರೀ ಎ.ಸಿ. ದೇವೇಗೌಡರ ಕಮಿಟಿ ವರದಿ ಇದೆ. ಅದೇರೀತಿ ಹೈಯರ್ ಎಜುಕೇಷನ್‌ಗೆ ಸಂಬಂಧಪಟ್ಟಂತೆ ರಾಜ್ ಕಮಿಟಿ ವರದಿ ಇದೆ. ಆದರೂ ಈ ಕಮಿಟಿ ಏತಕ್ಕೆ ಬೇಕಾಗಿತ್ತು. ಇವರು ತಮಗೆ ಬೇಕಾದವರು ಎಂದು ಈ ರೀತಿ ಮಾಡಿದ್ದಾರೋ ಏನೋ ಗೊತ್ತಿಲ್ಲ. ಯಾವುದೇ ಒಂದು ಕಮಿಟಿ ಮಾಡಬೇಕಾದರೆ ಒಂದು ಟರ್ಮ್ಸ್ ಆಫ್ ರೆಫರೆನ್ಸ್ ಇರುತ್ತದೆ. ಆದ್ದರಿಂದ ಈ ಕಮಿಟಿಯವರ ಟರ್ಮ್ಸ್ ಆಫ್ ರೆಫರೆನ್ಸ್ ಏನು ಎಂಬುದನ್ನು ನಾವು ತಿಳಿದುಕೊಳ್ಳಬೇಕಾಗುತ್ತದೆ. ಈಗಾಗಲೇ ಎರಡು ಕಮಿಟಿಗಳ ವರದಿಗಳು ಇರುವಾಗ ಮತ್ತೊಂದು ಕಮಿಟಿಯ ಅಗತ್ಯವಾದರೂ ಏನಿತ್ತು ?

ಶ್ರೀ ಎಂ. ಕೃಷ್ಣಪತಿ.—ಎ.ಸಿ. ದೇವೇಗೌಡರ ಕಮಿಟಿ ಆಡ್ಮಿನಿಸ್ಟ್ರೆಟಿವ್ ಮ್ಯಾಟರ್‌ಗೋಸ್ಕರ ರಚನೆ ಯಾಗಿತ್ತು. ಈಗ ಶ್ರೀ ನರಸಿಂಹಯ್ಯನವರ ಕಮಿಟಿ ರಚನೆ ಮಾಡಿರುವುದು ಈಗಿನ ಪರೀಕ್ಷಾ ಪದ್ಧತಿ, ಕರಿಕ್ಯುಲಮ್ ಹಾಗೂ ಪಠ್ಯಪುಸ್ತಕಗಳನ್ನು ಬದಲಾವಣೆ ಮಾಡುವ ಬಗ್ಗೆ ವರದಿ ಕೊಡುವ ಸಲುವಾಗಿ. ಈ ಬಗ್ಗೆ ನಾನು ನಾಳೆ ವಿವರಣೆ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ, ಈ ಕಮಿಟಿ ರಚನೆ ಬಗ್ಗೆ ಬೇರೆ ಟರ್ಮ್ಸ್ ಆಫ್ ರೆಫರೆನ್ಸ್ ಇದೆ, ಈ ಬಗ್ಗೆ ಸವಿಸ್ತಾರವಾಗಿ ಉತ್ತರ ಕೊಡುವುದಾಗಿ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಒಟ್ಟಿನಲ್ಲಿ ಹೇಳಬೇಕೆಂದರೆ, ಇವರ ಮಿಡ್ಲ್-ಮೀಲ್ಸ್ ಯೋಜನೆ ಸಂಪೂರ್ಣವಾಗಿ ಲಫಲವಾಗಿದೆ. ಪಠ್ಯಪುಸ್ತಕಗಳನ್ನು ಇವರು ಸರಿಯಾಗಿ ಹಂಚಿಕೆ ಮಾಡಿಲ್ಲ, ಫೀ ಪದ್ಧತಿಯನ್ನು ಸರಿ ಯಾಗಿ ಜಾರಿಗೆ ತಂದಿಲ್ಲ, ಈ ಕೆಲವೊಂದು ಕಾರಣಗಳಿಗೋಸ್ಕರವಾಗಿ ನಾನು ಇವರ ಬೇಡಿಕೆಗಳನ್ನು ಬೇಡಿಕೆಗಳನ್ನು ವಿರೋಧಿಸುತ್ತೇನೆ. ನನಗೆ ಇಷ್ಟು ಹೊತ್ತು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಪ್ರಕಟಣೆ

ಶ್ರೀ ಎಂ.ಎನ್. ಕೃಷ್ಣನ್‌ರವರ ದಸ್ತಗಿರಿ

ಅಧ್ಯಕ್ಷರು.—ಈಗ ಒಂದು ಪ್ರಕಟಣೆ

ವಿಧಾನ ಸಭೆಯ ಸದಸ್ಯರುಗಳಾದ ಶ್ರೀ ಪಂಪಾಪತಿ ಹಾಗೂ ಶ್ರೀ ಎಂ.ಎಸ್. ಕೃಷ್ಣನ್ ಇವರು ಗಳನ್ನು ಕರ್ನಾಟಕ ಪೋಲೀಸ್ ಕಾಯ್ದೆಯ ೭೧ನೇ ಕಲಮಿನ ಮೇರೆಗೆ ಬೆಂಗಳೂರು ನಗರದ ಕೃಷ್ಣ ರಾಜೇಂದ್ರ ವೃತ್ತದ ಬಳಿ ಈ ದಿನ ಮಧ್ಯಾಹ್ನ ೧.೧೫ ಗಂಟೆಗೆ ದಸ್ತಗಿರಿ ಮಾಡಲಾಯಿತೆಂದು ಹಾಗೂ ಅವರುಗಳನ್ನು ಅನುಕ್ರಮವಾಗಿ ಸೆಂಟ್ರಲ್ ಪೋಲೀಸ್ ಠಾಣೆಯಲ್ಲಿ ಹಾಗೂ ಮಲ್ಲೇಶ್ವರಂ ಪೋಲೀಸ್ ಠಾಣೆಯಲ್ಲಿ ಇಟ್ಟುಕೊಳ್ಳಲಾಗಿದೆಯೆಂದು ಬೆಂಗಳೂರಿನ ಆಲಸೂರು ಗೇಟ್ ಉಪವಿಭಾಗದ ಅರಕ್ಷಕ ನಿರೀಕ್ಷಕರಿಂದ ನನಗೆ ಸಂದೇಶ ಬಂದಿದೆ.

ಶ್ರೀ ಎಸ್ ಬಂಗಾರಪ್ಪ —ಮುಂದೆ ಏನು ಮಾಡುತ್ತಾರೆಂಬುದನ್ನು ಸಹ ಸರ್ಕಾರದವರು ಹೇಳ ಬೇಕಾಗುತ್ತದೆ.

ಅಧ್ಯಕ್ಷರು.—ನನಗೆ ಬಂದ ಸುದ್ದಿಯನ್ನು ಹೇಳಿದ್ದೇನೆ.

ಶ್ರೀ ಎಸ್ ಬಂಗಾರಪ್ಪ.—ಇವರ ಬಗ್ಗೆ ಮುಂದಿನ ಕ್ರಮವೇನೆಂಬುದನ್ನು ಸರ್ಕಾರದವರು ತಿಳಿಸಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಅವರನ್ನು ಜಾಗ್ರತೆ ಬಿಡುಗಡೆ ಮಾಡುತ್ತಾರೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳಾದ ಶ್ರೀ ಬೊಮ್ಮಾಯಿ ಅವರು ಒಂದು ಹೇಳಿಕೆ ನೀಡುತ್ತಾರೆ.

Statement by the Minister
ಬರಗಾಲದ ಬಗ್ಗೆ ಅಧ್ಯಯನ ಸಮಿತಿ ರಚನೆ

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಅಧ್ಯಕ್ಷರೇ, ರಾಜ್ಯಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಬರಗಾಲದ ಪರಿಸ್ಥಿತಿಯ ಬಗ್ಗೆ ಒಂದು ಮೆಮೊರಾಂಡಮ್‌ನ್ನು ಸಬ್‌ಮಿಟ್ ಮಾಡಿದ್ದೇವೆ. ಇದರ ಬಗ್ಗೆ ನಾನು ಒಂದು ಹೇಳಿಕೆಯನ್ನು ಕೊಡುತ್ತಿದ್ದೇನೆ.

ಈ ಸದನದ ಮಾನ್ಯ ಸದಸ್ಯರಿಗೆ ತಿಳಿದಿರುವ ಹಾಗೆ ನಾನು ದಿನಾಂಕ ೨೨ನೇ ಜುಲೈ ೧೯೮೫ ಮತ್ತು ೧ನೇ ಆಗಸ್ಟ್ ೧೯೮೫ ರಂದು ಈ ಸದನದಲ್ಲಿ ರಾಜ್ಯದಲ್ಲಿರುವ ಅಭಾವ ಪರಿಸ್ಥಿತಿ ಬಗ್ಗೆ ಧೀರ್ಘವಾದ ಹೇಳಿಕೆಯನ್ನು ನೀಡಿದ್ದೇನೆ. ಈ ಬಗ್ಗೆ ತಕ್ಷಣವೇ ಕೇಂದ್ರ ಸರ್ಕಾರದ ಸಹಾಯವನ್ನು ಕೋರಲು ಒಂದು ಜ್ಞಾಪನ ಪತ್ರವನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸುತ್ತೇವೆಂದು ತಿಳಿಸಿದ್ದೆ. ಅದೇ ರೀತಿ ಪ್ರತಿ ಜಿಲ್ಲೆಯಿಂದ ಮಳೆ ಬಿದ್ದ ವರದಿ ಮತ್ತು ಬಿತ್ತನೆ ಇಗೈರಿಗಳ ವಿವರಗಳನ್ನು ತರಿಸಿ ಅವರ ಆಧಾರದ ಮೇಲೆ ರಾಜ್ಯದ ೧೭ ಜಿಲ್ಲೆಗಳ ೧೪೨ ತಾಲ್ಲೂಕುಗಳ ೧೭,೬೮೫ ಗ್ರಾಮಗಳು ಅಭಾವ ಪರಿಸ್ಥಿತಿಯಲ್ಲಿವೆ ಎಂದು ಗಮನಿಸಿ ಗುರುತಿಸಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಮಂಡಗೋಡ ಮತ್ತ ಸರಸಿ ತಾಲ್ಲೂಕುಗಳನ್ನು ಅಭಾವ ಪರಿಸ್ಥಿತಿಯ ತಾಲ್ಲೂಕುಗಳೆಂದು ಗುರುತಿಸಲಾಗಿದೆ. ಇಡೀ ರಾಜ್ಯದ ದಕ್ಷಿಣ ಕನ್ನಡ ಮತ್ತು ಕೊಡಗು ಜಿಲ್ಲೆಗಳನ್ನು ಮಾತ್ರ ಅಭಾವಕ್ಕೊಳಗಾದ ಜಿಲ್ಲೆಗಳೆಂದು ಪರಿಗಣಿಸಿಲ್ಲ.

೧೫೧೦ ಕೋಟಿ ರೂಪಾಯಿಗಳ ಸಹಾಯ ಧನವನ್ನು ಕೋರುವ ಜ್ಞಾಪನ ಪತ್ರವನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಈಗಾಗಲೇ ಸಲ್ಲಿಸಲಾಗಿದೆ.

ಸಹಾಯ ಧನವನ್ನು ಕೋರಲಾಗಿರುವ ವಿವಿಧ ಕಾರ್ಯಕ್ರಮಗಳು ಕೆಳಗಿನಂತಿವೆ.

೧) ಉದ್ಯೋಗ ನಿರ್ಮಾಣಕ್ಕಾಗಿ	೫೬.೫೦ ಕೋಟಿಗಳ
೨) ನೀರು ಪೂರೈಕೆಗಾಗಿ	
ಅ) ಗ್ರಾಮೀಣ ನೀರು ಪೂರೈಕೆಗಾಗಿ	೪೧.೮೩ ,,
ಆ) ನಗರ ನೀರು ಪೂರೈಕೆಗಾಗಿ	೫ ೪೪ ,,
ಇ) ಕುಡಿಯುವ ನೀರಿನ ಸಾಗಾಣಿಕೆಗಾಗಿ	೩.೦೦ ,,
೩) ವ್ಯವಸಾಯ ಕಾರ್ಯಕ್ರಮಗಳಿಗಾಗಿ	೧೦.೦೯ ,,
೪) ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಟ್ಟಿರುವ ಅಲ್ಪಾವಧಿ ಸಾಲವನ್ನು ಮಧ್ಯಮಾವಧಿ ಸಾಲವನ್ನಾಗಿ ಪರಿವರ್ತಿಸಲು ಬೇಡಿದ ಸಹಾಯ	೨.೪೩ ,,
೫) ಜನಾರೋಗ್ಯ	೩.೧೦ ,,
೬) ಪೂರಕ ಆಹಾರ ಪೋಷಣೆ	೨.೦೯ ,,
೭) ಮೇವು ಪೂರೈಕೆ ಮಂತ್ತು ಪಶು ವೈದ್ಯಕೀಯ ರಕ್ಷಣೆ	೧೧.೯೮ ,,
೮) ರಾಜ್ಯದ ಎಲ್ಲಾ ಹೋಬಳಿಗಳ ಮಟ್ಟದಲ್ಲಿ ಮಳೆ ಮಾಪನ ಕೇಂದ್ರವನ್ನು ಸ್ಥಾಪಿಸುವ ಸಲುವಾಗಿ	೦.೧೨ ,,
೯) ಶಾಶ್ವತ ಪರಿಹಾರ ಕಾರ್ಯಕ್ರಮಗಳಿಗಾಗಿ	೧೪.೦೦ ,,
ಒಟ್ಟು	೧೫೦.೮೮

೧೫೧೦ ಕೋಟಿ ಎಂದು ಹೇಳಬಹುದು.

ರಾಜ್ಯದ ಅಭಾವ ಪರಿಸ್ಥಿತಿಯನ್ನು ಸ್ಥಳ ಪರಿಶೀಲನೆ ನಡೆಸಿ ಪರಿಶೀಲಿಸಲು ಅಧ್ಯಯನ ತಂಡವನ್ನು ಕಳುಹಿಸುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ. ಇದೇ ಸಂದರ್ಭದಲ್ಲಿ ವೀಸ್ ಅಂಡ್ ಮೀನ್ಸ್ ಮುಂಗಡ ೪೦ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡುವಂತೆ ಕೇಂದ್ರ ಸರ್ಕಾರವನ್ನು ಕೋರಲಾಗಿದೆ.